**Garment Labour Union**

glu.org.in

#176 Pantharapalya, Near Railway Gate
Mysore Road, Bangalore 560039

**Tel** 080 28602028 **eMail** info@glu.org.in

**Reg No.** ALCB- 2/ DRT/CR- 11/2012

ದಿನಾಂಕ:28.06.2017

ಗೆ,

ನಿರ್ದೇಶಕರು,

ಕಾರ್ಖಾನೆಗಳು ಮತ್ತು ಬಾಯ್ಲರ್ ಇಲಾಖೆ,

ಕಾರ್ಮಿಕ ಭವನ, ಬನ್ನೇರುಘಟ್ಟರಸ್ತೆ,

ಬೆಂಗಳೂರು – 560029

OFFICE OF THE DIRECTOR FACTORIES & BOILERS ★ Bannerghatta Road, Bangalore-29 ★
No. ...
Date 26/06/2017

ಯಿಂದ,

ಸರೋಜ.ಕೆ

ಪ್ರಧಾನ ಕಾರ್ಯದರ್ಶಿ

ಗಾರ್ಮೆಂಟ್ ಲೇಬರ್‌ಯೂನಿಯನ್,

ನಂ. 176, ಪಂತರಪಾಳ್ಯ, ರೈಲ್ವೇಗೇಟ್ ಹತ್ತಿರ,

ಮೈಸೂರುರಸ್ತೆ, ಬೆಂಗಳೂರು – 560039.

ವಿಷಯ: ದಿನದ ಕೆಲಸದ ಅವಧಿಯನ್ನು ಕಾನೂನು ಬಾಹಿರವಾಗಿ 9.30 ಘಂಟೆಗೆ ಮಾಲೀಕರಾದ ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್‌ನ ಹಿಂದುಜಾ ಪ್ರೊಸಸಿಂಗ್ ಅಂಡ್ ಫಿನಿಷಿಂಗ್‌ಯುನಿಟ್– 2 ರವರು, ನಿಗಧಿ ಪಡಿಸಿರುವ ಬಗ್ಗೆ ದೂರು.

ಮಾನ್ಯರೇ,

ಗಾರ್ಮೆಂಟ್ ಲೇಬರ್ ಯೂನಿಯನ್ ನ ಪ್ರದಾನ ಕಾರ್ಯದರ್ಶಿಯಾದ ಸರೋಜ.ಕೆ ಆದ ನಾನು ತಿಳಿಯಪಡಿಸುವುದೇನೆಂದರೆ, ಗಾರ್ಮೆಂಟ್ ಲೇಬರ್ ಯೂನಿಯನ್ ನೊಂದಾಯಿಸಿದ ಸಂಘಟನೆಯಾಗಿದ್ದು ಕಾರ್ಮಿಕ ಹಕ್ಕುಗಳಿಗಾಗಿ ಶ್ರಮಿಸುತ್ತಿದೆ.

ಗೋಕಲ್‌ದಾಸ್‌ಎಕ್ಸ್‌ಪೋರ್ಟ್ಸ್ ನ ಹಿಂದುಜಾ ಪ್ರೊಸಸಿಂಗ್ ಅಂಡ್ ಫಿನಿಷಿಂಗ್‌ಯುನಿಟ್– 2, 5ನೇ ಕ್ರಾಸ್, ಮೈಸೂರುರಸ್ತೆ, ಬೆಂಗಳೂರು – 560026, ಯುನಿಟ್ ನ ಕಾರ್ಮಿಕರು ನಮ್ಮ ಯೂನಿಯನ್ ನ ಸದಸ್ಯರಾಗಿದ್ದು ಅಲ್ಲಿಯ ಕಾರ್ಮಿಕರು ನಮಗೆ ದೂರಿರುವಂತೆ, ಮಾಲೀಕರು ಪ್ರತಿ ದಿನದ ಕೆಲಸದ ಅವಧಿಯನ್ನು ಈ ಮೊದಲು ಇದ್ದ ಕೆಲಸದ ಅವಧಿ ಬೆಳ್ಳಗ್ಗೆ 9:00 ರಿಂದ ಸಂಜೆ 5:30 ರಿಂದ ಬೆಳ್ಳಗ್ಗೆ 9:00 ಸಂಜೆ 6:30 ರ ವರೆಗೆ ಕಾನೂನು ಬಾಹಿರವಾಗಿ ಸೂಕ್ತ ಪ್ರಾಧಿಕಾರದ ಅನುಮತಿ ಇಲ್ಲದೆ ಮಾರ್ಚ್ 2017 ರಿಂದ ಹೆಚ್ಚಿಸಿರುತ್ತಾರೆ ಮತ್ತು ಬಲವಂತವಾಗಿ ಕಾರ್ಮಿಕರನ್ನು 9.30 ಘಂಟೆ ಕೆಲಸ ಮಾಡಲು ಹಿಂಸಿಸುತಿದ್ದಾರೆ.

[redacted]

ಈ ವಿಷಯವನ್ನು ನಮ್ಮ ಯೂನಿಯನ್ ಮಾಲೀಕರೊಂದಿಗೆ ಮಾತನಾಡಲು ಪ್ರಯತ್ನಿಸಿದಾಗ ಅವರು ಸಹಕರಿಸಿರುವುದಿಲ್ಲ ಮತ್ತು ನಮ್ಮ ಯೂನಿಯನ್ ಸದಸ್ಯತ್ವ ಪಡೆದ ಕಾರ್ಮಿಕರಿಗೆ ಈ ವಿಷಯವಾಗಿ ಕೆಲಸದ ಸ್ಥಳದಲ್ಲಿ ಅನಾವಶ್ಯಕ ತೊಂದರೆಕೊಡುತ್ತಿದ್ದಾರೆ.

ಈ ಮೂಲಕ ತಮ್ಮ ಗಮನಕ್ಕೆ ತರುವುದೇನೆಂದರೆ, ಕಾರ್ಖಾನೆಗಳ ಕಾಯ್ದೆ 1948 ರ ಅಧ್ಯಾಯ 6 ರಲ್ಲಿ ಕೆಲಸದ ಅವಧಿಗೆ ಸಂಬಂಧಪಟ್ಟಂತೆ ಉಪಬಂಧಗಳಿದ್ದು ಅದರ ಅನ್ವಯ ಯಾವುದೇ ಕಾರ್ಮಿಕಳು/ನು ವಾರಕ್ಕೆ 48 ಘಂಟೆಗಳಿಗಿಂತ ಹೆಚ್ಚು ಕೆಲಸ ಮಾಡುವಂತೆ ಒತ್ತಾಯಿಸುವಂತಿಲ್ಲ. ಆದರೆ, ಗೋಕಲ್‌ದಾಸ್‌ಎಕ್ಸ್‌ಪೋರ್ಟ್ಸ್ ನ ಹಿಂದುಜಾ ಪ್ರೊಸಸಿಂಗ್ ಅಂಡ್ ಫಿನಿಷಿಂಗ್ ಯುನಿಟ್– 2 ರ ಮಾಲೀಕರು ಕಾರ್ಖಾನೆಗಳ ಕಾಯ್ದೆಯ ಕೆಲಸದ ಅವಧಿಗೆ ಸಂಬಂಧಪಟ್ಟ ಕಲಂಗಳ ಮತ್ತುಇತರೆಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸಿ ಕಾರ್ಮಿಕರಿಗೆ ಕೇವಲ ಊಟದ ವಿರಾಮ ವಿನಃ ಬೇರೆಯಾವುದೇ ವಿರಾಮಕ್ಕೆ ಅವಕಾಶ ನೀಡದೆ ಹೆಚ್ಚಿನ ಉತ್ಪಾದನಾ ಒತ್ತಡ ಹೇರಿ ಕಾನೂನು ಬಾಹಿರವಾಗಿ ದಿನಕ್ಕೆ 9.30 ಘಂಟೆಯಂತೆ ವಾರಕ್ಕೆ 57 ಘಂಟೆಗಳ ಕಾಲ ಕೆಲಸ ಮಾಡಿಸಿಕೊಳ್ಳುತ್ತಿದ್ದಾರೆ ಅಲ್ಲದೆ 48 ಘಂಟೆಗಳ ಮೇಲ್ಪಟ್ಟ ಅವಧಿಗೆ ಯಾವುದೇ ಹೆಚ್ಚಿನ ಭತ್ಯೆಯನ್ನು ನೀಡದೆ ಕಾರ್ಖಾನೆಗಳ ಕಾಯ್ದೆ ಉಲ್ಲಂಘನೆ ಮತ್ತು ಕಾರ್ಮಿಕರ ಶೋಷಣೆ ಮಾಡುತ್ತಿರುತ್ತಾರೆ.

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಕಾರ್ಖಾನೆಯು 22 ಘಟಕಗಳನ್ನು ಕರ್ನಾಟಕ ರಾಜ್ಯಾದ್ಯಂತ ಹೊಂದಿದ್ದು ರಫ್ತುಕಾರ್ಖಾನೆಯಾಗಿದ್ದು ಯಾವುದೇ ಕಾರ್ಮಿಕ ಕಾನೂನು, ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ನಿಯಮಗಳು ಮತ್ತು ರಾಷ್ಟ್ರೀಯ ಕಾರ್ಮಿಕ ಹಕ್ಕುಗಳ ಪ್ರಾಧಿಕಾರದ ಕಾರ್ಮಿಕರ ಕೆಲಸದ ಅವಧಿಗೆ ಸಂಬಂಧಪಟ್ಟಂತೆ ವಿಧಿಸಿರುವ ನಿಬಂಧನೆ ಮತ್ತು ಉಪಬಂಧಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿ ಕಾರ್ಮಿಕರಿಗೆ ದಿನಕ್ಕೆ 9.30 ಘಂಟೆಗಳು ದುಡಿಯುವಂತೆ ಒತ್ತಡವನ್ನು ಹೇರುತ್ತಿದ್ದಾರೆ.

ಆದ್ದರಿಂದ ಈ ಮೂಲಕ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ತಕ್ಷಣವೇ ಗೋಕಲ್‌ದಾಸ್‌ಎಕ್ಸ್‌ಪೋರ್ಟ್ಸ್ ನ ಹಿಂದುಜಾ ಪ್ರೊಸಸಿಂಗ್ ಅಂಡ್ ಫಿನಿಷಿಂಗ್ ಯುನಿಟ್– 2 5ನೇ ಕ್ರಾಸ್, ಮೈಸೂರುರಸ್ತೆ, ಬೆಂಗಳೂರು – 560026 ಯುನಿಟ್‌ನ್ನು ತಪಾಸಣೆಗೊಳಪಡಿಸಿ ಕೆಲಸದ ಅವಧಿಯನ್ನು ವಾರಕ್ಕೆ 48 ಘಂಟೆಗಳಿಗೆ ಸೀಮಿತಗೊಳಿಸುವಂತೆ ನಿರ್ದೇಶಿಸಿ ಕಾರ್ಖಾನೆಗಳ ಕಾಯ್ದೆಉಲ್ಲಂಘನೆಗೆಕಠಿಣ ಶಿಕ್ಷೆ ಮತ್ತು ದಂಡ ವಿಧಿಸುವುದರೊಂದಿಗೆ ಕಾರ್ಮಿಕರಿಗೆ ಕೆಲಸದ ಅವಧಿಗೆ ಸಂಬಂಧಪಟ್ಟಂತೆ ನ್ಯಾಯ ದೊರಕಿಸಿಕೊಡಬೇಕೆಂದು ಕೇಳಿಕೊಳ್ಳುತೇವೆ.

ಧನ್ಯವಾದಗಳೊಂದಿಗೆ

Saroja K.

ಸರೋಜ.ಕೆ

(ಪ್ರಧಾನ ಕಾರ್ಯದರ್ಶಿ)

[redacted]